ಇದಾಗಿ ಮೂರು ತಿಂಗಳು ಕಳೆದಿವೆ, ಸಲೀಂ ಒಂಟಿ ಕಾಲಿನಲ್ಲಿ ಚೇರ್ ಮೇಲೆ ಕುಳಿತು ಚಾರ್ಮಿನಾರ್ ಬಳಿ ಲಗುಬಗೆಯಿಂದಲೇ ಅತ್ತರು ಮಾರುವುದರಲ್ಲಿ ನಿರತನಾಗಿದ್ದಾನೆ. ಅವನೀಗ ಚಾರ್ಮಿನಾರ್ ಬಿಟ್ಟರೆ ಮೊದಲಿನಂತೆ ಅತ್ತರು ಮಾರಲು ಗೋಲ್ಕೊಂಡ, ಹುಸೇನ್ ಸಾಗರ್, ಬಿರ್ಲಾ ಮಂದಿರ ಮುಂತಾದ ಸ್ಥಳಗಳಿಗೆ ಹೋಗುತ್ತಿಲ್ಲ. ತಂಗಿಯರಿಬ್ಬರಿಗೂ ಮದುವೆ ಮಾಡಲು ತಯಾರು ನಡೆಸುತ್ತಿದ್ದಾನೆ. ಕುಂಟನಾದರೂ ಸಲೀಂ ಒಳ್ಳೆಯ ಹುಡುಗನೆಂದು ತನ್ನ ಮಗಳನ್ನು ಅವನಿಗೆ ಕೊಟ್ಟು ಮದುವೆ ಮಾಡಲು ಜ್ಯೂಸ್ ಅಂಗಡಿಯ ಜಹಂಗೀರ್ ಚಾಚಾ ನಿರ್ಧರಿಸಿ ಸಲೀಮನ ಅಮ್ಮನ ಬಳಿ ಪ್ರಸ್ತಾಪ ಕೂಡ ಮಾಡಿದ್ದಾನೆ. ಜಹಂಗೀರ್ ಚಾಚಾನ ಮಗಳೇನೂ ಕಡಿಮೆಯಿಲ್ಲ. ಕತ್ರಿನಾ ಕೈಫನ್ನು ಅವಳ ಮುಂದೆ ನಿವಾಳಿಸಿ ಬೀಸಾಕಬೇಕೆನ್ನುವಂತಿದ್ದಾಳೆ. ಒಂದೇ ವಠಾರದಲ್ಲಿರುವುದರಿಂದ ಅವಳು ಮತ್ತು ಸಲೀಂ ಆಗಾಗ ಕದ್ದುಮುಚ್ಚಿ ನೋಡಿಕೊಳ್ಳುತ್ತಾರೆ. ಚಾಚಾ ತನ್ನಮ್ಮನೊಂದಿಗೆ ಮದುವೆಯ ಬಗ್ಗೆ ಪ್ರಸ್ತಾಪಿಸಿರುವ ಸಂಗತಿ ಸಲೀಮನ ಕಿವಿಗೂ ಬಿದ್ದು ಅವನೂ ಉಲ್ಲಾಸಗೊಂಡಿದ್ದಾನೆ. ಯಾರಾದರೂ ರೆಗ್ಯುಲರ್ ಗಿರಾಕಿಗಳು, ''ಏನು ಸಲೀಂ ಭಯ್ಯಾ ಏನಾಯ್ತು ಕಾಲಿಗೆ...'' ಎಂದು ವಿಚಾರಿಸಿದರೆ–

''ಅಯ್ಯೋ ಅದೊಂದು ದೊಡ್ಡ ಕತೆ ಬಿಡಿ. ನಾನೊಂದು ಸಿನಿಮಾಗೆ ಹೀರೋ ಆಗಿ ಸೆಲೆಕ್ಟ್ ಆಗಿದ್ದೆ. ಗೋಲ್ಕೊಂಡ ಫೋರ್ಟ್‌ನಲ್ಲಿ ಶೂಟಿಂಗ್ ನಡಿತಿರಬೇಕಾದರೆ ಕಾಲು ಜಾರಿ ಬಿದ್ದು ಈ ಗತಿ ಬಂತು. ಸಿನಿಮಾ ಸಹವಾಸವೇ ಬೇಡ ಅಂತ ತೀರ್ಮಾನಿಸಿ ಬಿಟ್ಟಿದ್ದೀನಿ. ಈ ಅತ್ತರು ವ್ಯಾಪಾರದಲ್ಲೇ ತುಂಬಾ ನೆಮ್ಮದಿಯಾಗಿದ್ದೀನಿ...'' ಎಂದು ನಗುತ್ತಾನೆ ಒಳಗೆಲ್ಲೋ ನೋವಿದ್ದರೂ ತೋರಗೊಡದೆ. ಇತ್ತ ಚಾಂದ್ ಬಾನು ಸಿನಿಮಾ ತಾರೆಯಾಗಿ ಸ್ವಿಟ್ಜರ್ಲೆಂಡ್‌ನಲ್ಲಿ ಶೂಟಿಂಗ್‌ನಲ್ಲಿ ಬಿಜಿಯಾಗಿರುವಳಲ್ಲದೆ ಲಂಡನ್ನಿನ ದೊಡ್ಡ ಡೈಮಂಡ್ ವ್ಯಾಪಾರಿಯ ಒಬ್ಬನೇ ಮಗನೊಂದಿಗೆ ಅವಳ ಮದುವೆ ಕೂಡ ನಿಶ್ಚಯವಾಗಿದೆ. ಸಿನಿಮಾದ ಕ್ಲೈಮ್ಯಾಕ್ಸ್ ದೃಶ್ಯಗಳನ್ನು ಹೈದರಾಬಾದಿನ ಗೋಲ್ಕೊಂಡದಲ್ಲಿ ಒಂದು ವಾರ ಶೂಟ್ ಮಾಡಲು ನಿರ್ಧರಿಸಲಾಗಿದೆ. ಆ ಸಮಯದಲ್ಲಿ ಸಲೀಮನ ಹತ್ತಿರ ಅತ್ತರು ಖರೀದಿಸಿ, ಅವನಿಂದ ಸೀಸದ ಗುಂಡು ಎತ್ತಿಸಿ, ತನ್ನೊಂದಿಗೆ ಆಕ್ಟ್ ಮಾಡ್ತೀಯ ಎಂದು ಕೇಳಿ ತಮಾಷೆ ಮಾಡಬೇಕೆಂದು ಯೋಚಿಸುತ್ತಾ ಹುಣ್ಣಿಮೆಯ ರಾತ್ರಿಯಂದು ತಾನು ಹೇಳಿದಂತೆ ಸಲೀಂ ತನ್ನನ್ನು ಹೊತ್ತು ಗೋಲ್ಕೊಂಡ ಫೋರ್ಟ್ ಮೆಟ್ಟಿಲು ಇಳಿದಿದ್ದನ್ನು ನೆನಪಿಸಿಕೊಂಡು ಚಾಂದ್ ಬಾನು ಆಗಾಗ ಮುದಗೊಳ್ಳುತ್ತಾಳೆ. ಹಾಗೊಂದು ವೇಳೆ ಶೂಟಿಂಗ್ ಟೈಮಿನಲ್ಲಿ ಗೋಲ್ಕೊಂಡದ ಬಳಿ ಸಲೀಂ ಸಿಕ್ಕಿದರೆ ಅವನಿಗೊಂದು ಡೈಮಂಡ್ ಪ್ರೆಸೆಂಟ್ ಮಾಡಿ ತನ್ನ ಭಾವಿ ಪತಿಗೂ ಪರಿಚಯಿಸಬೇಕೆಂದು ಸಂಭ್ರಮಗೊಳ್ಳುತ್ತಾಳೆ ಕೂಡ... ಹೈ ಪ್ರೊಫೈಲ್ ಮೆಂಟಾಲಿಟಿ!

ಕೊನೆಯ ಟಿಪ್ಪಣಿ :

ಪ್ರಿಯ ಓದುಗರೇ, ಈ ಕತೆಯಲ್ಲಿ ಸಲೀಂ ಮತ್ತು ಚಾಂದ್ ಬಾನುಗೆ ಗೊತ್ತಿರದ ಕೆಲ ವಿಷಯಗಳನ್ನು ನಿಮ್ಮ ಬಳಿ ಹೇಳಬೇಕಾಗಿರುವುದು ಕತೆಗಾರನಾದ ನನ್ನ ಧರ್ಮವಾಗಿದೆ, ಇಲ್ಲದಿದ್ದಲ್ಲಿ ಈ ಕತೆ ಅಪೂರ್ಣವೆಂದು ನಿಮಗೆ ಎಲ್ಲಿಯಾದರೂ ಅನ್ನಿಸಿಬಿಡುವುದಂತೂ ಗ್ಯಾರಂಟಿ. ಚಾಂದ್ ಬಾನು ಅಪ್ಪ ಮಹಮ್ಮದ್ ಖಾನನಿಗೆ ಅದೃಷ್ಟ ಒಲಿದು ಬಂದು ತುಂಬಾ ಶ್ರೀಮಂತನಾದದ್ದು ಅವಳು ಹುಟ್ಟಿದ ನಂತರವೇ. ಅಷ್ಟೇಕೆ, ಅವಳು ಹುಟ್ಟಿದ ದಿನವೇ ಚಾರ್ಮಿನಾರ್ ಬಳಿ ಇಟ್ಟುಕೊಂಡಿದ್ದ ಅವನ ಸಣ್ಣ ಪರ್ಲ್ ಅಂಗಡಿಯಲ್ಲಿ ಮುಂಬೈನಿಂದ ಅಡ್ರೆಸ್ ಕಾಣದ ಐವತ್ತು ಲಕ್ಷ ಮೌಲ್ಯದ ಚಿಕ್ಕ ಡೈಮಂಡ್ ಥೈಲಿ ಪರ್ಲ್ ಕಟ್ಟುಗಳ ಜೊತೆ ಪತ್ತೆಯಾಗಿತ್ತು. ಅಂದಿನಿಂದ ಇಂದಿನವರೆಗೆ ಮಹಮ್ಮದ್ ಖಾನ್ ಹಿಂತಿರುಗಿ ನೋಡಿರಲಿಲ್ಲ. ಮತ್ತು ಚಾರ್ಮಿನಾರ್ ಬಳಿಯಿಂದ ತನ್ನ ವ್ಯಾಪಾರ ಸ್ಥಳವನ್ನು ಬಂಜಾರ ಹಿಲ್ಸ್‌ಗೂ ಮತ್ತು ಮುಂಬಯಿಗೂ ಸ್ಥಳಾಂತರಿಸಿದ್ದ. ಮೂರು ತಿಂಗಳ ಹಿಂದೆ ಲಂಡನ್ ಡೈಮಂಡ್